## ಸೂಕ್ತಿಪ್ರಭ

ಯಾವ ವ್ಯಕ್ತಿಯು ತಾನು ಪರಿಪೂರ್ಣತೆಯಿಂದ ಎಷ್ಟು ದೂರವಿದ್ದೇನೆಂದು ತಿಳಿಯುತ್ತಾನೋ ಅವನು ಅಷ್ಟೇ ಅದಕ್ಕೆ ಹತ್ತಿರವಿರುತ್ತಾನೆ.

— ಗೆರಾರ್ಡ್ ಗ್ರೂಟ್ (Gerard Groote)

❊ ❊

ನೀನು ಕಷ್ಟ ಮತ್ತು ವಿರೋಧಗಳನ್ನು ಎದುರಿಸಿದಾಗ ಅವುಗಳನ್ನು ಮುರಿಯಲು ಪ್ರಯತ್ನಿಸಬೇಡ, ಬದಲು ಮೆತ್ತಗೆ ನಿಧಾನವಾಗಿ ಅವುಗಳು ಬಗ್ಗುವಂತೆ ಮಾಡು.

—ಫ್ರಾನ್ಸಿಸ್ ಡ ಸೇಲ್ಸ್ (Francis de Sales)

❊ ❊

ಯಾರು ತನ್ನ ಕೋಪವನ್ನು ಗೆಲ್ಲುತ್ತಾನೊ ಅವನು ತನ್ನ ಅತ್ಯಂತ ದೊಡ್ಡ ಶತ್ರುವನ್ನು ಜಯಿಸಿದಂತೆ. — ಲ್ಯಾಟಿನ್ ಗಾದೆ.

❊ ❊

ಆಲೋಚನೆ ಮಾಡದೆ ಮಾತನಾಡುವುದು ಗುರಿಹಿಡಿಯದೆ ತುಪಾಕಿ ಹೊಡೆಯುವುದಕ್ಕೆ ಸಮಾನ. — ರೀಡರ್ಸ್ ಡೈಜೆಸ್ಟ್.

❊ ❊

ಕಾರ್ಯ ಮಾಡುವಾಗ ದಕ್ಷನಾಗಿರು, ಮಾತನಾಡುವಾಗ ಎಚ್ಚರದಿಂದಿರು. ಆಲೋಚಿಸುವಾಗ ದೂರದೃಷ್ಟಿಯಿಂದಿರು. —ಮಾರ್ಕ್ಸ್.

❊ ❊

ನಮ್ಮ ಹೃದಯದ ಬಡಿತ ಗೋರಿಯೆಡೆಗೆ ಸಾಗುತ್ತಿರುವ ನಮ್ಮ ಮೆರವಣಿಗೆಯ ನಡಿಗೆಯ ಹಿಮ್ಮೇಳ. — ಆಂಗ್ಲಕವಿ.

❊ ❊

ಓದಲು ಯೋಗ್ಯವಾದುದನ್ನು ಬರೆಯಿರಿ ಅಥವಾ ಬರೆಯಲು ಯೋಗ್ಯವಾದುದನ್ನು ಮಾಡಿ. — ಅನಾಮಿಕ.

❊ ❊

ಭೂತಕಾಲದ ಬಗ್ಗೆ ಮನುಷ್ಯ ಕುಂಟ (ಅಸಹಾಯಕ), ಭವಿಷ್ಯತ್ಕಾಲದ ಬಗ್ಗೆ ಕುರುಡ. ಆದುದರಿಂದ ಅವೆರಡನ್ನೂ ಬದಿಗಿರಿಸಿ, ವರ್ತಮಾನದ ಬಗ್ಗೆಯೇ ಯೋಚಿಸುವುದು ಒಳಿತು. — ವಿನೋಬಾ

# ಪ್ರಾರ್ಥನೆ

## *ಜಗದ್ಧಾತ್ರೀಸ್ತೋತ್ರಮ್*

**ಆಧಾರ ಭೂತೇ ಚಾಧೇಯೇ ಧೃತಿರೂಪೇ ಧುರಂಧರೇ |**
**ಧ್ರುವೇ ಧ್ರುವಪದೇ ಧೀರೇ ಜಗದ್ಧಾತ್ರಿ ನಮೋಽಸ್ತು ತೇ ||**

ಜಗತ್ತಿಗೆಲ್ಲ ಆಧಾರಭೂತಳು ನೀನೇ, ಆಧೇಯಳೂ ನೀನೇ, ಧಾರಣಶಕ್ತಿಸ್ವರೂಪಳೂ ಮತ್ತು ಸರ್ವೋತ್ತಮಳೂ ನೀನೇ; ಶಾಶ್ವತಳು, ಶಾಶ್ವತಸ್ಥಾನಳು ಮತ್ತು ಅಚಲಸ್ವಭಾವವುಳ್ಳವಳು ನೀನು; ಹೇ ಜಗದ್ಧಾತ್ರಿ, ನಿನಗೆ ನಮಸ್ಕಾರ.

**ಶವಾಕಾರೇ ಶಕ್ತಿರೂಪೇ ಶಕ್ತಿಸ್ಥೇ ಶಕ್ತಿವಿಗ್ರಹೇ |**
**ಶಾಕ್ತಾಚಾರಪ್ರಿಯೇ ದೇವಿ ಜಗದ್ಧಾತ್ರಿ ನಮೋಽಸ್ತು ತೇ ||**

ಹೇ ದೇವಿ, ನೀನೇ ನಿರ್ಗುಣಶಿವಸ್ವರೂಪಳು ಮತ್ತು ಶಕ್ತಿ; ನೀನೇ ಸಮಸ್ತ ಶಕ್ತಿಗಳಲ್ಲಿಯೂ ನೆಲಸಿರುವೆ; ಶಕ್ತಿವಿಗ್ರಹಳೂ ಮತ್ತು ಶಾಕ್ತರಿಗೆ ಉಚಿತವಾದ ಆಚಾರದಿಂದ ಸಂತುಷ್ಟಳಾಗುವವಳೂ ನೀನೇ; ಹೇ ಜಗದ್ಧಾತ್ರಿ, ನಿನಗೆ ನಮಸ್ಕಾರ.

**ಜಯದೇ ಜಗದಾನಂದೇ ಜಗದೇಕಪ್ರಪೂಜಿತೇ |**
**ಜಯ ಸರ್ವಗತೇ ದುರ್ಗೇ ಜಗದ್ಧಾತ್ರಿ ನಮೋಽಸ್ತು ತೇ ||**

ಹೇ ದುರ್ಗಾದೇವಿ, ನೀನು ಜಯವನ್ನು ನೀಡುವವಳು, ಜಗದಾನಂದಸ್ವರೂಪಳು; ಜಗತ್ತಿನಲ್ಲಿ ನೀನೊಬ್ಬಳೆ ಪ್ರಕೃಷ್ಟರೂಪದಿಂದ ಪೂಜಿತಳಾದವಳು; ನೀನು ಸರ್ವವ್ಯಾಪಿನಿ; ನಿನಗೆ ಜಯವಾಗಲಿ; ಹೇ ಜಗದ್ಧಾತ್ರಿ, ನಿನಗೆ ನಮಸ್ಕಾರ.

**ಮಹಾವಿಘ್ನೇ ಮಹೋತ್ಸಾಹೇ ಮಹಾಮಾಯೇ ವರಪ್ರದೇ|**
**ಪ್ರಪಂಚಸಾರೇ ಸಾಧ್ವೀಶೇ ಜಗದ್ಧಾತ್ರಿ ನಮೋಽಸ್ತು ತೇ ||**

ಮಹಾವಿಘ್ನಸ್ವರೂಪಳೂ, ಮಹಾ ಉತ್ಸಾಹರೂಪಿಣಿಯೂ, ಮಹಾಮಾಯೆಯೂ ಮತ್ತು ವರಪ್ರದಳೂ ನೀನೇ; ನೀನು ಜಗತ್ತಿನ ಸಾರಸ್ವರೂಪಳು, ಸಾಧುವೃಂದಗಳ ಈಶ್ವರಿ; ಹೇ ಜಗದ್ಧಾತ್ರಿ, ನಿನಗೆ ನಮಸ್ಕಾರ.

**ಅಗಮ್ಯೇ ಜಗತಾಮಾದ್ಯೇ ಮಾಹೇಶ್ವರಿ ವರಾಂಗನೇ |**
**ಅಶೇಷರೂಪೇ ರೂಪಸ್ಥೇ ಜಗದ್ಧಾತ್ರಿ ನಮೋಽಸ್ತು ತೇ ||**

ನೀನು ಅಗಮ್ಯಳು, ಜಗತ್ತಿನ ಆದಿಕಾರಣಳು, ಮಹೇಶ್ವರನ ಪತ್ನಿ, ಅತ್ಯಂತ ಶ್ರೇಷ್ಠಳಾದವಳು; ನೀನು ಅಖಿಲ ಸೌಂದರ್ಯಸ್ವರೂಪಳು, ಸರ್ವಸ್ವರೂಪಳು; ಹೇ ಜಗದ್ಧಾತ್ರಿ, ನಿನಗೆ ನಮಸ್ಕಾರ.